## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕಿನಲ್ಲಿ ಬರುವ ಮಾರ್ಕೋನಹಳ್ಳಿ ಜಲಾಶಯದ ಹಿನ್ನೀರಿನಿಂದ ಮಂಗಳಾ ಜಲಾಶಯಕ್ಕೆ ಫೀಡರ್ ಕಾಲುವೆಯನ್ನು ನಿರ್ಮಿಸುವ ಕಾಮಗಾರಿಯ ರೂ.6.76 ಕೋಟಿ ಮೊತ್ತದ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

*****

**ಓದಲಾಗಿದೆ :**

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಾನೀನಿ/ತಾಂತ್ರಿಕ-4/ಎಡಯೂರು ವಿಭಾಗ/122/2021-22/3287, ದಿನಾಂಕ:24.03.2022.

**ಪ್ರಸ್ತಾವನೆ :**

ಮೇಲೆ ಓದಲಾದ ಪತ್ರದಲ್ಲಿ, ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕಿನಲ್ಲಿ ಬರುವ ಮಾರ್ಕೋನಹಳ್ಳಿ ಜಲಾಶಯದ ಹಿನ್ನೀರಿನಿಂದ ಮಂಗಳಾ ಜಲಾಶಯಕ್ಕೆ ಫೀಡರ್ ಕಾಲುವೆಯನ್ನು ನಿರ್ಮಿಸುವ ಕಾಮಗಾರಿಯ ರೂ.6.76 ಕೋಟಿ ಮೊತ್ತದ ಅಂದಾಜು ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ರವರು ಕೋರಿರುತ್ತಾರೆ.

2. ಕುಣಿಗಲ್ ತಾಲ್ಲೂಕಿನ ತಿಗಳರಪಾಳ್ಯ ಗ್ರಾಮದ ಹತ್ತಿರ ನಿರ್ಮಿಸಲಾಗಿರುವ ಮಂಗಳಾ ಜಲಾಶಯಕ್ಕೆ ಕಳೆದ 10 ವರ್ಷಗಳಲ್ಲಿ ಮಳೆ ಅಭಾವದಿಂದ ನೀರಿನ ಕೊರತೆಯಿಂದಾಗಿ ಮೂಲ ಯೋಜಿತ ಜಲಾಶಯದ ಒಟ್ಟಾರೆ 2320 ಅಚ್ಚುಕಟ್ಟು ಪ್ರದೇಶಕ್ಕೆ ನಿಗದಿಪಡಿಸಿರುವ ಬೆಳೆಯ ಪದ್ಧತಿಗನುಗುಣವಾಗಿ ನ್ಯಾಯಾಧಿಕರಣದ ತೀರ್ಪಿನ ಅನುಸಾರ ಹಂಚಿಕೆಯಾದ ನೀರನ್ನು ಒದಗಿಸಲು ಸಾಧ್ಯವಾಗುತ್ತಿಲ್ಲವೆಂದು; ಈ ಭಾಗದ ರೈತರು, ಜನ-ಜಾನುವಾರುಗಳಿಗೆ ಕುಡಿಯುವ ನೀರಿಗೂ ಸಹ ತುಂಬಾ ತೊಂದರೆಯಾಗಿರುವುದಾಗಿ ವ್ಯನಿ. ಕಾನೀನಿನಿ ರವರು ವರದಿ ಮಾಡಿರುತ್ತಾರೆ.

3. ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನಲ್ಲಿ ಬರುವ ಮಂಗಳಾ ಜಲಾನಯನ ಅಚ್ಚುಕಟ್ಟುದಾರರು ಹಾಗೂ ಚುನಾಯಿತ ಜನಪ್ರತಿನಿಧಿಗಳ ಮನವಿಯ ಮೇರೆಗೆ ಮಾರ್ಕೋನಹಳ್ಳಿ ಜಲಾಶಯದ ಹಿನ್ನೀರಿನಿಂದ ಮಂಗಳಾ ಜಲಾಶಯಕ್ಕೆ ಫೀಡರ್ ಕಾಲುವೆಯನ್ನು ನಿರ್ಮಿಸುವ ಕುರಿತಂತೆ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಕುಣಿಗಲ್ ತಾಲ್ಲೂಕಿನ ರೈತ ಮುಖಂಡರುಗಳು ಮನವಿ ಸಲ್ಲಿಸಿರುವುದಾಗಿ; ಕುಣಿಗಲ್ ತಾಲ್ಲೂಕಿನ ರೈತರು ಮತ್ತು ಸಾರ್ವಜನಿಕರ ಹಿತ ದೃಷ್ಟಿಯಿಂದ ಮಾರ್ಕೋನಹಳ್ಳಿ ಜಲಾಶಯ ತುಂಬಿ ಹರಿಯುವ ವೇಳೆಯಲ್ಲಿ ಜಲಾಶಯದಿಂದ ಹೊರ ಹೋಗುವ ಹೆಚ್ಚುವರಿ ನೀರನ್ನು ಸದುಪಯೋಗಪಡಿಸಿಕೊಳ್ಳುವ ಸಲುವಾಗಿ ಹೆಚ್ಚುವರಿ ನೀರನ್ನು ಮಂಗಳಾ ಜಲಾಶಯಕ್ಕೆ ಹರಿಸಿಕೊಟ್ಟು ಮಂಗಳಾ ಜಲಾಶಯದ ಅಚ್ಚುಕಟ್ಟು ಪ್ರದೇಶದ ರೈತರಿಗೆ ಅನುಕೂಲ ಮಾಡಬೇಕೆಂದು ಕೋರಿರುತ್ತಾರೆ.

4. 1996-97ನೇ ಸಾಲಿನಿಂದ ಹೇಮಾವತಿ ನಾಲಾ ವಲಯ ತುಮಕೂರು ವ್ಯಾಪ್ತಿಯಲ್ಲಿನ ನಾಗಮಂಗಲ ಶಾಖಾ ನಾಲೆ ಮತ್ತು ತುಮಕೂರು ಶಾಖಾ ನಾಲೆಗಳ ಮುಖಾಂತರ ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಮತ್ತು ಡಿಸೆಂಬರ್ ಮಾಹೆಯವರೆಗಿನ ದಿನಗಳಲ್ಲಿ ಬೀಳುವ ನೀರು ಮಾರ್ಕೋನಹಳ್ಳಿ ಜಲಾಶಯದಲ್ಲಿ ಸಂಗ್ರಹಣೆಯಾಗುತ್ತಿರುತ್ತದೆ ಎಂದು; ಇದಲ್ಲದೇ, ಮಾರ್ಕೋನಹಳ್ಳಿ ಜಲಾಶಯದ ಜಲಾನಯನ ಪ್ರದೇಶದಲ್ಲಿ ಬರುವ ಸಣ್ಣ ನೀರಾವರಿ ಕೆರೆಗಳಿಂದ ಕೋಡಿಬಿದ್ದ ನೀರು ಹಳ್ಳಗಳ ಮುಖಾಂತರ ಅಕ್ಟೋಬರ್‌ನಿಂದ ಡಿಸೆಂಬರ್ ಮಾಹೆಯವರೆಗಿನ ದಿನಗಳಲ್ಲಿ ಜಲಾಶಯದಲ್ಲಿ ಸಂಗ್ರಹಣೆಯಾಗುತ್ತಿದ್ದು, ಮಾರ್ಕೋನಹಳ್ಳಿ ಜಲಾಶಯದ ಜಲಾನಯನ ಪ್ರದೇಶದಲ್ಲಿ ಬಿದ್ದ ಮಳೆಯ ನೀರೂ ಸಹ ಶಿಂಷಾ ಕಣಿವೆಯ ಮುಖಾಂತರ ಜಲಾಶಯವನ್ನು ಸೇರುವುದಾಗಿ ವ್ಯನಿ, ಕಾನೀನಿನಿ ರವರು ತಿಳಿಸಿರುತ್ತಾರೆ.

5. 2000-01 ರಿಂದ 2021-22 ರ ವರೆಗಿನ ಅವಧಿಯಲ್ಲಿ ಮಾರ್ಕೋನಹಳ್ಳಿ ಜಲಾಶಯದ (FRL: 731.57 ಮೀ) ನೀರಿನ ಹೊರಹರಿವಿನ ದಿನಗಳನ್ನು ಗಮನಿಸಿಲಾಗಿ, 7 ವರ್ಷಗಳು 20 ದಿನಗಳಿಗಿಂತ ಹೆಚ್ಚು ಹರಿದಿರುತ್ತದೆ; ಜಲಾಶಯವು ಭರ್ತಿಯಾಗಿ ಹೊರ ಹರಿವು ಉಂಟಾದಾಗ, ಜಲಾಶಯದ FRL ನಿಂದ 1.20 ಮೀ ಕೆಳಭಾಗದಲ್ಲಿ ಫೀಡರ್ ಕಾಲುವೆಯ ಗೇಟ್‌ನ್ನು ಅಳವಡಿಸಿ ನಾಲೆಯ ಮುಖಾಂತರ 150 ಎಂ.ಸಿ.ಎಫ್.ಟಿ. ನೀರನ್ನು ಮಂಗಳಾ ಜಲಾಶಯಕ್ಕೆ (FRL: 728.65 ಮೀ) ಫೀಡರ್ ಕಾಲುವೆ ಮುಖಾಂತರ ಹರಿಸಲು ಉದ್ದೇಶಿಸಲಾಗಿದೆ ಎಂದು ಹಾಗೂ ಇದರಿಂದ ಮಂಗಳಾ ಜಲಾಶಯದ ಕೆಳಭಾಗದಲ್ಲಿ ಬರುವ ಕೆರೆಗಳನ್ನು ಸಹ ನೀರು ತುಂಬಿಸಲು ಅನುಕೂಲವಾಗುವುದಾಗಿ ವ್ಯನಿ, ಕಾನೀನಿನಿ ರವರು ವರದಿ ಮಾಡಿರುತ್ತಾರೆ.

6. ಕಾಮಗಾರಿಯ ಅಂದಾಜು ಪಟ್ಟಿಯನ್ನು 2018-19 ನೇ ಸಾಲಿನ ಜಲಸಂಪನ್ಮೂಲ ಇಲಾಖೆಯ ದರಪಟ್ಟಿ ಮತ್ತು ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ದರಗಳನ್ನು ಮತ್ತು 01-01-2022 ರಿಂದ ಜಾರಿಗೆ ಬಂದಿರುವ ಜಿ.ಎಸ್.ಟಿ. ದರಗಳನ್ನು ಅಳವಡಿಸಿಕೊಂಡು ರೂ.6.76 ಕೋಟಿಗಳಿಗೆ ತಯಾರಿಸಲಾಗಿದ್ದು, ಸದರಿ ಅಂದಾಜು ಪಟ್ಟಿಗೆ ದಿನಾಂಕ:22-01-2022 ರಂದು ಜರುಗಿದ ಕಾವೇರಿ ನೀರಾವರಿ ನಿಗಮದ 25ನೇ ಅಂದಾಜು ಸಮಿತಿಯು ತೀರುವಳಿ ನೀಡಿದ್ದು, ದಿನಾಂಕ:24-01-2022 ರಂದು ನಡೆದ 75ನೇ ಮಂಡಳಿಯ ಸಭೆಯಲ್ಲಿ ಅನುಮೋದನೆ ದೊರೆತಿರುವುದಾಗಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರು ವರದಿ ಮಾಡಿರುತ್ತಾರೆ.

7. ಯೋಜನಾ ಇಲಾಖೆಯ ಸಂಖ್ಯೆ:ಪಿಡಿಎಸ್/38/ಎಸ್‌ಡಿಪಿ/2021 ದಿನಾಂಕ:20-01-2022 ರಲ್ಲಿ ಅನುಮೋದನೆಗೊಂಡ 2021-22ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆ (SDP) ಅಡಿಯಲ್ಲಿ ಕಾವೇರಿ ನೀರಾವರಿ ನಿಗಮ ನಿಯಮಿತದ ಕಾರ್ಯಕ್ರಮ ಪಟ್ಟಿಯಲ್ಲಿ ರೂ.260.00 ಲಕ್ಷ ಅನುದಾನದೊಂದಿಗೆ ಸದರಿ ಕಾಮಗಾರಿಯು ಸೇರ್ಪಡೆಯಾಗಿದೆ.

8. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ:

**ಸರ್ಕಾರಿ ಆದೇಶ ಸಂಖ್ಯೆ: ಜಸಂಇ 43 ಎನ್ ಹೆಚ್ ಪಿ 2022**

**ಬೆಂಗಳೂರು, ದಿನಾಂಕ: 21-05-2022**

ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕಿನಲ್ಲಿ ಬರುವ ಮಾರ್ಕೋನಹಳ್ಳಿ ಜಲಾಶಯದ ಹಿನ್ನೀರಿನಿಂದ ಮಂಗಳಾ ಜಲಾಶಯಕ್ಕೆ ಫೀಡರ್ ಕಾಲುವೆಯನ್ನು ನಿರ್ಮಿಸುವ ಕಾಮಗಾರಿಯ ರೂ.6.76 ಕೋಟಿ (ರೂಪಾಯಿ ಆರು ಕೋಟಿ ಎಪ್ಪತ್ತಾರು ಲಕ್ಷಗಳು ಮಾತ್ರ) ಮೊತ್ತದ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2. ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಆಇ 1 ಎಫ್‌ಟಿಪಿ 2022, ದಿನಾಂಕ:04-04-2022 ರಲ್ಲಿ ಇಲಾಖಾ ಮುಖ್ಯಸ್ಥರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

21/05/2022

( ಮನೋಹರ ವೈ. ರೊಟ್ಟಿ )
ವಿಶೇಷ ಕರ್ತವ್ಯಾಧಿಕಾರಿ
ಜಲಸಂಪನ್ಮೂಲ ಇಲಾಖೆ

ಇವರಿಗೆ :

1. ಪ್ರಧಾನ ಮಹಾಲೇಖಪಾಲರು (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕ ಪರಿಶೋಧನ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ (ಗ್ರೇಡ್-2), ಜಲಸಂಪನ್ಮೂಲ ಇಲಾಖೆ.
3. ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ (ಗ್ರೇಡ್-1), ಜಲಸಂಪನ್ಮೂಲ ಇಲಾಖೆ.
4. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಹೇಮಾವತಿ ನಾಲಾ ವಲಯ, ತುಮಕೂರು.
6. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ. ಆರ್ಥಿಕ ಕೋಶ), ವಿಧಾನ ಸೌಧ.
7. ನಿರ್ದೇಶಕರು, ಸಂಪೂರ್ಣ ಯೋಜನಾ ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ, ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

+++++